1 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ಇಂಡಿ.
ಇವರ ನ್ಯಾಯಾಲಯದಲ್ಲಿ.

ಸಿ.ಸಿ.ನಂ. 2656/21
ಪ್ರಾಸಾ :1
ಚಾ.ಸಾ.:4

ಸಾಕ್ಷಿದಾರರ ಹೆಸರು : ಪ್ರಕಾಶ ಹಳ್ಳಿ

ವಯಸ್ಸು : 38 ವರ್ಷ

ಉದ್ಯೋಗ : ಮುಖ್ಯ ಪೋಲಿಸ ಪೇದೆ ಹೊರ್ತಿ ಪೋಲಿಸ ಠಾಣೆ,

ವಾಸ ಸ್ಥಳ :ಹೊರ್ತಿ

(ಈ ದಿವಸ ದಿನಾಂಕ 6-06-2026 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ**:**

1) ನಾನು 2019 ರಿಂದ 2024 ರವರೆಗೆ ನಾನು ಹೊರ್ತಿ ಪೋಲಿಸ ಠಾಣೆಯಲ್ಲಿ ಪೋಲಿಸ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ:20-5-2021 ರಂದು ಬೆಳಿಗ್ಗೆ 11 ಗಂಟೆ ಸುಮಾರಿಗೆ ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ನನಗೆ ಮತ್ತು ಚಾಸಾ-5 ರವರಿಗೆ ಠಾಣೆಗೆ ಕರೆಯಿಸಿ ಬಾತ್ಮಿ ವಿಷಯ ತಿಳಿಸಿರುತ್ತಾರೆ. ಹೊರ್ತಿ ಗ್ರಾಮದ ಎಲ್ ಟಿ ನಂ. 1 ರಲ್ಲಿ ಆರೋಪಿತನು ಸರ್ಕಾರದ ಪರವಾನಿಗೆ ಇಲ್ಲದೆ ಮೊರಾರ್ಜಿ ದೇಸಾಯಿ ಶಾಲೆಯ ಹತ್ತಿರ ಎನ್ ಎಚ್-52 ರಸ್ತೆಯ ಪಶ್ಚಿಮ ದಿಕ್ಕಿಗೆ ತನ್ನ ಚಹಾದ ಅಂಗಡಿಯ ಮುಂದೆ ಸಾರ್ವಜನಿಕರಿಗೆ ಕೂಡಿಸಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳದೆ ಅವರಿಗೆ ಸಾರಾಯಿ ಕುಡಿಯಲು ಅನುಮತಿ ನೀಡಿದ್ದು ಆ ಸಮಯದಲ್ಲಿ ಕೊವಿಡ ಕಾಯಿಲೆ ಜಾರಿಯಲ್ಲಿದ್ದು ಅದನ್ನು ತಡೆಗಟ್ಟಲು ಸರ್ಕಾರದಿಂದ ಲಾಕಡೌನ ಆದೇಶವಾಗಿದ್ದರೂ ಕೂಡ ಆರೋಪಿತನು ಸಾರ್ವಜನಿಕಗೆ ಸಾರಾಯಿ ಕುಡಿಯಲು ಅನುಮತಿ ಮಾಡಿಕೊಟ್ಟು ಗ್ಲಾಸ ಮತ್ತು ನೀರನ್ನು ಕೊಟ್ಟಿರುತ್ತಾನೆ ಎಂಬ ಮಾಹಿತಿ ಬಂದಿದ್ದು ಅಲ್ಲಿ ಹೋಗಿ ರೆಡ ಮಾಡಲು ತಿಳಿಸಿರುತ್ತಾರೆ. ಅದಕ್ಕೆ ನನಗೆ ಇಬ್ಬರು

ಪಂಚರನ್ನು ಕರೆದುಕೊಂಡು ಬರಲು ಸೂಚಿಸಿರುತ್ತಾರೆ. ನಾನು ಅವರ ಆದೇಶದಂತೆ ಇಬ್ಬರು ಪಂಚರನ್ನು ಕರೆದುಕೊಂಡು ಬಂದಿರುತ್ತೇನೆ ಮತ್ತು ಸದರಿಯವರಿಗೆ ಚಾಸಾ-1 ರವರು ಬಾತ್ಮಿ ವಿಷಯ ತಿಳಿಸಿರುತ್ತಾರೆ.  ನಾವು ರೇಡ ಮಾಡಿದಾಗ ಪಂಚನಾಮೆ ಬರೆದುಕೊಡಲು ಕೇಳಿಕೊಂಡಾಗ ಅವರು ಒಪ್ಪಿಕೊಂಡಿರುತ್ತಾರೆ.

2) ಆಗ ನಾವೆಲ್ಲರೂ ನಮ್ಮ ಠಾಣೆಯ ಜೀಪ ನಂ. ಕೆಎ-28/411 ವಾಹನದಲ್ಲಿ ಸಾಮಾಜಿಕ ಅಂತರ ಕಾಪಾಡಿಕೊಂಡು ಮತ್ತು ಮಾಸ್ಕ ಧರಿಸಿಕೊಂಡು 11.15 ಗಂಟೆಗೆ ಠಾಣೆಯಿಂದ ಹೊರಟು ಬಾತ್ಮಿ ಬಂದ ಸ್ಥಳಕ್ಕೆ ತಲುಪಿದ್ದು ಮೊರಾರ್ಜಿ ದೇಸಾಯಿ ಶಾಲೆಯ ಸ್ವಲ್ಪ ದೂರದಲ್ಲಿ ನಿಂತುಕೊಂಡು ವಾಚ ಮಾಡಲಾಗಿ ಎನ್ -ಎಚ್-52 ರಸ್ತೆಯ ಪಕ್ಕದಲ್ಲಿ ಚಹಾದ ಅಂಗಡಿ ಇದ್ದು ಅದರ ಮುಂದೆ ಸಾರ್ವಜನಿಕರು ಕೂಡಿದ್ದು ಸಾರ್ವಜನಿಕರಿಗೆ ಗ್ಲಾಸು ಮತ್ತು ನೀರನ್ನು ಆರೋಪಿತನು ಸರಬರಾಜು ಮಾಡುವುದು ಕಂಡು ಬಂದಿರುತ್ತದೆ ಅದನ್ನು ಗಮನಿಸಿ ನಾವು ರೆಡ ಮಾಡಲಾಗಿ ಅಲ್ಲಿ ಕುಳಿತಿದ್ದ ಸಾರ್ವಜನಿಕರು ಓಡಿ ಹೋಗಿರುತ್ತಾರೆ. ಆರೋಪಿತನನ್ನು ಹಿಡಿದಿರುತ್ತೇವೆ. ಆಗ ಚಾಸಾ-1 ರವರು ಆರೋಪಿತನನ್ನು ವಿಚಾರಿಸಲಾಗಿ ಸದರಿಯವರು ತನ್ನ ಹೆಸರು ಅನೀಲ ಧರ್ಮು ರಾಥೋಡ ಎಂದು ತಿಳಿಸಿರುತ್ತಾನೆ. ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿ ಅಲ್ಲಿ ದೊರೆತ ವಸ್ತುಗಳಾದ 1) ಓಲ್ಡ ಟವರಿನ ವಿಸ್ಕಿ -180 ಎಮ್ ಎಲ್ ಎನ್ ನ ಖಾಲಿ ಪೌಚುಗಳು, 2) ನಾಲ್ಕು ಪ್ಲಾಸ್ಟಿಕ ಗ್ಲಾಸುಗಳು, 3) ಎರಡು ಪ್ಲಾಸ್ಟಿಕ ಖಾಲಿ ಬಾಟಲಿಗಳು ದೊರೆತವು . ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿ ಸದರಿ ವಸ್ತುಗಳನ್ನು ಜಪ್ತಿಮಾಡಿಕೊಂಡಿರುತ್ತೇವೆ.  ಆ ಸಮಯದಲ್ಲಿ ಕೊರೋನಾ ಸಾಂಕ್ರಾಮಿಕ ರೋಗ ಇರುವುದರಿಂದ ಕರ್ನಾಟಕ ರಾಜ್ಯ ಸರ್ಕಾರದಿಂದ ಲಾಕ ಡೌನ ಆದೇಶವಾಗಿರುತ್ತದೆ. ಪಂಚನಾಮೆಯನ್ನು 11.30 ರಿಂದ 12.30 ರವರೆಗೆ ಮಾಡಿರುತ್ತಾರೆ.  ನಂತರ ಜಪ್ತಿಪಡಿಸಿಕೊಂಡು ವಸ್ತುಗಳು ಮತ್ತು ಆರೊಪಿತನೊಂದಿಗೆ ಠಾಣೆಗೆ ಬಂದು ಚಾಸಾ-1

ರವರು ಸರ್ಕಾರಿ ತರ್ಫೆ ಪಿರ್ಯಾದಿ ನೀಡಿರುತ್ತಾರೆ. ನಾನು ಕುರಿತು ಚಾಸಾ-1 ರವರ ಮುಂದೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲು : ಆರೋಪಿತರ ಪರವಾಗಿ:</u>

ಆರೋಪಿತರ ಪರ ವಕೀಲರು ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ಪಾಟೀಸವಾಲು ಮಾಡಲು ಸಕಾರಣ ಇಲ್ಲದಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ : ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

1 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ವ ಜೆ.ಎಂ.ಎಫ್.ಸಿ., ಇಂಡಿ